ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ದಿನಾಂಕ ೧೫-೬-೮೪ರಲ್ಲಿ ಇರುವಂತೆ ಸುಮಾರು ೫೧೫೮ ವಿದ್ಯಾವಂತ ಸಹಾಯಕರು ಮಜೂರುದಾರಿಗಳು ದಿನಗೂಲಿ ವೇತನದಲ್ಲಿ ಕೆಲಸವನ್ನು ನಿರ್ವಹಿಸುತ್ತಿದ್ದಾರೆ.

ಆ) ದಿನಗೂಲಿ ಗ್ಯಾಂಗ್ ಮೆನ್‌ಗಳಿಗೆ ಸಂಬಂಧಪಟ್ಟಂತೆ ದಿನಾಂಕ. ೧೫-೬-೮೪ರ ಸರ್ಕಾರೀ ಆದೇಶವು ವಿದ್ಯಾವಂತ ಸಹಾಯಕರು ಮಜೂರುದಾರಿಗಳಿಗೆ ಅನ್ವಯವಾಗುವುದಿಲ್ಲ.

ಪ್ರಮಾಣಿಕ ಶಾಲೆಯ ಹಾಗೂ ಅಂಗವಿಕಲರ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಮುಖ್ಯೋಪಧ್ಯಾಯರ ಹಾಗೂ ಪದವೀಧರ ಸಹಾಯಕರುಗಳ ವೇತನ ಶ್ರೇಣಿಯಲ್ಲಿ ತಾರತಮ್ಯವಿರುವ ವಿಚಾರ.

೧೧೬೧ ಶ್ರೀ ಬಸವರಾಜ್ ಪಾಟೀಲ್ (ಹುಮ್ನಾಬಾದ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಸಮಾಜಕಲ್ಯಾಣ ಹಾಗೂ ರೇಷ್ಮೆ ಸಚಿವರು ದಯವಿಟ್ಟು ಉತ್ತರಿಸುವರೆ ?

ಅ) ಪ್ರಮಾಣಿತ ಶಾಲೆಯ ಹಾಗೂ ಅಂಗವಿಕಲರ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಮುಖ್ಯೋಪಧ್ಯಾಯರ ಹಾಗೂ ಪಧವೀದರ ಸಹಾಯಕರುಗಳ ವೇತನ ಶ್ರೇಣಿಯಲ್ಲಿ ತಾರತಮ್ಯ ವಿರುವ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದರೆ ಇಂಥ ತಾರತಮ್ಯಕ್ಕೆ ಕಾರಣವೇನು ?

ಇ) ಯಾವಾದರೂ ಕಿರಿಯ ಸರ್ಕಾರೀ ನೌಕರನಿಗೆ ಅವನ ಹಿರಿಯನಿಗಿಂತ ಹೆಚ್ಚು ವೇತನ ಶ್ರೇಣಿಯನ್ನು ನೀಡಲಾಗಿರುವ ಘಟನೆಗಳಿವೆಯೇ ?

ಈ) ಹೆಚ್ಚಿನ ವಿದ್ಯಾರ್ಹತೆ ಇರುವ ಹಾಗೂ ಒಂದೇ ಬಗೆಯ ಕರ್ತವ್ಯವನ್ನು ನಿರ್ವಹಿಸುತ್ತಿರುವವರಿಗೆ ಬೇರೆ ಬೇರೆ ರೀತಿಯ ವೇತನ ಶ್ರೇಣಿಯನ್ನು ನೀಡಿರುವ ಬಗೆಗೆ ಅನುನಿರಿಸಲಾಗುತ್ತಿರುವ ನೀತಿಗಳು ?

ಉ) ಅಸಮಾನತೆಯನ್ನು ನಿವಾರಿಸುವಲ್ಲಿ ಸರ್ಕಾರ ತಗೆದುಕೊಂಡಿರುವ ಕ್ರಮ.ವೇನು ?

ಶ್ರೀಮತಿ ಚಂದ್ರಪ್ರಭಾ ಅರಸ್ (ಸಮಾಜ ಕಲ್ಯಾಣ ಹಾಗೂ ರೇಷ್ಮೆ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಇಲ್ಲ.

ಈ) ಶಿಕ್ಷಣ ಇಲಾಖೆಯಲ್ಲಿ ತರಬೇತಿ ಪಡೆದ ಪದವೀದರರಿಗೆ ನೀಡುತ್ತಿರುವ ವೇತನ ಶ್ರೇಣಿಯನ್ನು ಸಮಾಜ ಕಲ್ಯಾಣ ಇಲಾಖೆಯಲ್ಲಿ ತರಬೇತಿ ಪಡೆದ ಪದವೀಧರರಿಗೂ ನೀಡಲಾಗುತ್ತಿದೆ.

ಉ) ಉದ್ಭವಿಸುವುದಿಲ್ಲ.

ಸವದತ್ತಿ ತಾಲ್ಲೂಕಿನಲ್ಲಿ ಮಲಪ್ರಭಾ ಯೋಜನೆ ನೀರಾವರಿಯಿಂದ ಜಮೀನುಗಳ ಮೇಲೆ ಪರಿಣಾಮ.

೧೪೨೫ ಶ್ರೀ ಆರ್. ವಿ. ಪಾಟೀಲ್ (ಸಾಂದತ್ತಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಸವದತ್ತಿ ತಾಲ್ಲೂಕಿನಲ್ಲಿ ಸವಳು ಜವಳು ಜಮೀನುಗಳು ಮಲಪ್ರಭಾ ಯೋಜನೆಯಿಂದ ನೀರಾವರಿಯಾಗಿರುವುದು ಸರ್ಕಾರದಪರ ಗಮನಕ್ಕೆ ಬಂದಿದೆಯೇ ?

ಮಾನ್ಯ ಸದಸ್ಯರು ಗೈರುಹಾಜರಾಗಿದ್ದಾರೆ.

ಅ) ಹಾಗಿದ್ದಲ್ಲಿ, ತಾಲ್ಲೂಕಿನಲ್ಲಿ ಜವಳು ಆದ ಹಾಗೂ ಸವಳು ಆದ ಪ್ರದೇಶದ ಒಟ್ಟು ವಿಸ್ತೀರ್ಣವೆಷ್ಟು ? (ಎಕರೆವಾರು ವಿವರ ತಿಳಿಸಬೇಕಾಗಿ ವಿನಂತಿ).

ಇ) ಈ ಸವಳು ಜವಳು ಆದ ಜಮೀನುಗಳ ಸುಧಾರಣೆಯ ಸಲುವಾಗಿ ಯಾವ ಕಾರ್ಯಕ್ರಮಂ ತೆಗೆದುಕೊಳ್ಳಲಾಗಿದೆ, ಹಾಗೂ ಸದರಿ ಕೆಲಸಕ್ಕೆ ಖರ್ಚಾದ ಹಣವೆಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ಜವುಳಾದ ಪ್ರದೇಶ — ೨,೫೮೭ ಎಕರೆಗಳು.

ಸವುಳಾದ ಪ್ರದೇಶ — ೧೫೦ ಎಕರೆಗಳು.

ಇ) ನೀರು ಸರಿಯಾಗಿ ಹರಿದು ಹೋಗುವಂತೆ ಬನಿಕಾಲುವೆಗಳನ್ನು ನಿರ್ಮಿಸಿ, ಸಾಗುವಳಿಗೆ ಜಮೀನನ್ನು ಯೋಗ್ಯಗೊಳಿಸಲು ಕ್ರಮಂ ಕೈಗೊಳ್ಳಲಾಗುತ್ತಿದೆ.

ಆಗಿರುವ ವೆಚ್ಚ (ಫೆಬ್ರುವರಿ, ೧೯೮೮ ರವರೆಗೆ) -ರೆ.೩೪,೩೫೨ ರೂಪಾಯಿಗಳು.

ಚುಂಚನೂರು ಹಾಗೂ ಉಜ್ಜನಕೊಪ್ಪ ನಡುವೆ ಹಳ್ಳಕ್ಕೆ ಸೇತುವೆ ಕಟ್ಟುವ ಬಗ್ಗೆ.

೧೨೭೪. ಶ್ರೀ ಫಕೀರಪ್ಪ ಅಲ್ಲಿಪ್ಪ, (ರಾಮದುರ್ಗ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ದಯವಿಟ್ಟು ಉತ್ತರಿಸುವರೆ ?

ಅ) ರಾಮದುರ್ಗ ತಾಲ್ಲೂಕಿನಲ್ಲಿ ಉಜ್ಜನಕೊಪ್ಪ ಗ್ರಾಮದ ಚುಂಚನೂರ ಹಾಗೂ ಉಜ್ಜನಕೊಪ್ಪ ನಡುವೆ ಇರುವ ಹಳ್ಳಕ್ಕೆ ಸೇತುವೆಯನ್ನು ಕಟ್ಟುವ ಬಗ್ಗೆ ಸಂಬಂಧಪಟ್ಟವರಿಗೆ ಹಲವಾರು ಅರ್ಜಿಗಳನ್ನು ಸಲ್ಲಿಸಿದ್ದರೂ ಕೂಡ ಇದರ ಬಗ್ಗೆ ಯಾವ ಕ್ರಮವನ್ನು ಕೈಕೊಳ್ಳದಿರಲು ಕಾರಣವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು.)

ಅ) ಈ ಸೇತುವೆಯಂ ಲೋಕೋಪಯೋಗಿ ಇಲಾಖೆಗೆ ಸೇರದ ಇರುವ ರಸ್ತೆಯ ಮೇಲೆ ಕಟ್ಟಬೇಕಾಗಿದ್ದು ಸುಮಾರು ೫ ಲಕ್ಷ ರೂ. ಗಳು ತಗಲಂತ್ತದೆ. ಆದ್ದರಿಂದ ಹಣದ ಲಭ್ಯತೆಗನು ಗುಣವಾಗಿ ಈ ಕೆಲಸವನ್ನು ತೆಗೆದುಕೊಳ್ಳುವುದನ್ನು ಪರಿಶೀಲಿಸಲಾಗುವುದು.

ರಾಜ್ಯದಲ್ಲಿ ಅರಣ್ಯ ಕಾಲೇಜುಂ ಸ್ಥಾಪನೆ ಬಗ್ಗೆ.

೧೧೪೨. ಶ್ರೀ ಎನ್. ಜಿ. ನಾಯಕ್ (ಮೊಳಕಾಲ್ಮೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ರಾಜ್ಯ ಅರಣ್ಯ ಸಚಿವರು ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯ ಅರಣ್ಯ ಸಂಪತ್ತಿನಲ್ಲಿ ಪ್ರಧಾನವಾಗಿ ರಾಜ್ಯ ಎಂಬ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇಲ್ಲಿ ಅರಣ್ಯ ಕಾಲೇಜು ಸ್ಥಾಪಿಸುವುದು ಅವಶ್ಯವಿದೆ ಎಂಬ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದರೆ ಈ ಬಗ್ಗೆ ಸರ್ಕಾರದವರು ಕೈಕೊಂಡ ಕ್ರಮವೇನು ?

ಶ್ರೀ ಬಿ. ಎ. ಜೀವಿಜಯ (ರಾಜ್ಯ ಅರಣ್ಯ ಸಚಿವರು).—

ಅ) ಹೌದು.

ಆ) ಅಂಥಹ ಪ್ರಸ್ತಾಪವು ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಮಾನ್ಯ ಸದಸ್ಯರು ಗೈರು ಹಾಜರಾಗಿದ್ದಾರೆ.